“ಮಧುರ ಮಕ್ಕಳೇ - 21 ಜನ್ಮಗಳ ರಾಜ್ಯಾಧಿಕಾರವನ್ನು ಪಡೆಯಬೇಕೆಂದರೆ ಜ್ಞಾನ ಧನದ ದಾನ ಮಾಡಿ, ನೀವು ಧಾರಣೆ ಮಾಡಿ ಮತ್ತೆ ಅನ್ಯರಿಗೂ ಮಾಡಿಸಿ”

ಪ್ರಶ್ನೆ: ನಡೆಯುತ್ತಾ-ನಡೆಯುತ್ತಾ ಗ್ರಹಚಾರಿ ಕುಳಿತುಕೊಳ್ಳಲು ಮುಖ್ಯ ಕಾರಣ ಏನಾಗಿದೆ?

ಉತ್ತರ: ಶ್ರೀಮತದ ಮೇಲೆ ಪೂರ್ಣವಾಗಿ ನಡೆಯುವುದಿಲ್ಲ, ಆದ್ದರಿಂದ ಗ್ರಹಚಾರಿ ಕುಳಿತುಕೊಳ್ಳುತ್ತದೆ. ಒಂದುವೇಳೆ ನಿಶ್ಚಯ ಬುದ್ಧಿಯವರಾಗಿ ಒಬ್ಬರ ಮತದನುಸಾರ ಸದಾ ನಡೆಯುತ್ತಿದ್ದರೆ ಗ್ರಹಚಾರಿ ಕುಳಿತುಕೊಳ್ಳಲು ಸಾಧ್ಯವಿಲ್ಲ, ಸದಾ ಕಲ್ಯಾಣ ಆಗುತ್ತಿರುವುದು. ಇದರಿಂದ ಕೊನೆಯಲ್ಲಿ ಬಂದವರೂ ಸಹ ಬಹಳ ಮುಂದೆ ಹೋಗಬಹುದಾಗಿದೆ. ಸೆಕೆಂಡಿನ ಆಟವಾಗಿದೆ. ಬಾಬಾನ ಮಕ್ಕಳಾಗುವುದರಿಂದ ಹಕ್ಕುಧಾರರಾಗುತ್ತಾರೆ. ಅಪಾರ ಸುಖದ ಆಸ್ತಿಯು ಸಿಕ್ಕಿ ಬಿಡುವುದು, ಆದರೆ ಸದಾ ಶ್ರೀಮತದ ಮೇಲೆ ನಡೆಯುತ್ತಿರಬೇಕು.

ಗೀತೆ: ನೀವು ಪ್ರೀತಿಯ ಸಾಗರ ಆಗಿದ್ದೀರಿ....................

ಓಂ ಶಾಂತಿ. ಓಂ ಶಾಂತಿಯ ಅರ್ಥವನ್ನಂತೂ ಮಕ್ಕಳಿಗೆ ಮತ್ತೆ ಮತ್ತೆ ತಿಳಿಸಲಾಗಿದೆ. ಓಂ ಎಂದರೆ ನಾನು ಆತ್ಮ, ನನ್ನದು ಶರೀರ. ತಂದೆಯು ಹೇಳುತ್ತಾರೆ - ನಾನೂ ಸಹ ಆತ್ಮ ಆದರೆ ನಾನು ಪರಮಾತ್ಮ. ತಂದೆಗೆ ಅವರದೇ ಆದಂತಹ ಶರೀರವಿಲ್ಲ. ಏಕೆಂದರೆ ಅವರಂತು ಎಲ್ಲರ ತಂದೆ ಆಗಿದ್ದಾರೆ. ನೀವು ಆತ್ಮ ಸೋ ಪರಮಾತ್ಮ ಎಂದು ಹೇಳಲು ಸಾಧ್ಯವಿಲ್ಲ. ಆದರೆ ನಾವು ಆತ್ಮರು ಪರಮಾತ್ಮನ ಸಂತಾನರಾಗಿದ್ದೇವೆಂಬುದು ಸರಿಯಾಗಿದೆ. ಬಾಕಿ ನಾವು ಆತ್ಮರೇ ಸೋ ಪರಮಾತ್ಮರಾಗುತ್ತೇವೆಂದು ಹೇಳುವುದು ಸಂಪೂರ್ಣವಾಗಿ ತಪ್ಪಾಗಿದೆ. ನೀವು ಮಕ್ಕಳು ತಂದೆಯನ್ನು ಅರಿತುಕೊಂಡಿದ್ದೀರಿ ಮತ್ತು ಇದು ಹಳೆಯ ಪ್ರಪಂಚವಾಗಿದೆ ಎನ್ನುವುದನ್ನೂ ತಿಳಿದುಕೊಂಡಿದ್ದೀರಿ. ಹೊಸ ಪ್ರಪಂಚವೆಂದು ಸತ್ಯಯುಗಕ್ಕೆ ಹೇಳಲಾಗುತ್ತದೆ ಆದರೆ ಸತ್ಯಯುಗ ಯಾವಾಗ ಇರುತ್ತದೆ ಇದನ್ನು ಯಾರೂ ತಿಳಿದುಕೊಂಡಿಲ್ಲ. ಅವರು ಕಲಿಯುಗವಂತು ಇನ್ನೂ 40,000 ವರ್ಷಗಳಿದೆ ಎಂದು ತಿಳಿದುಕೊಳ್ಳುತ್ತಾರೆ, ಆದರೆ ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ನಾವು ಶ್ರೀಮತದ ಮೇಲೆ ಹೊಸ ಪ್ರಪಂಚವನ್ನು ಸ್ಥಾಪನೆ ಮಾಡುತ್ತಿದ್ದೇವೆಂದು. ತಂದೆಯು ಹೇಳುತ್ತಾರೆ - ನಾನು ನಿಮ್ಮ ಮೂಲಕವೇ ಹೊಸ ಪ್ರಪಂಚದ ಸ್ಥಾಪನೆ ಮಾಡುತ್ತಿದ್ದೇನೆ ಆದರೆ ನಿಮ್ಮ ಮೂಲಕ ವಿನಾಶ ಮಾಡಿಸುವುದಿಲ್ಲ. ನೀವು ಶಿವಶಕ್ತಿಯರು ಪ್ರಜಾಪಿತ ಬ್ರಹ್ಮನ ಮುಖ ವಂಶಾವಳಿ ಬ್ರಾಹ್ಮಣರಾಗಿದ್ದೀರಿ, ಅಹಿಂಸಕ ಶಕ್ತಿಸೇನೆಯಾಗಿದ್ದೀರಿ. ನೀವೇ ತಂದೆಯಿಂದ ಆಸ್ತಿಯನ್ನು ಪಡೆದುಕೊಳ್ಳಲು ಅಧಿಕಾರಿಯಾಗಿದ್ದೀರಿ. ನೀವು ಬ್ರಾಹ್ಮಣ ಮಕ್ಕಳಿಗೆ ಶ್ರೀಮತ ಸಿಗುತ್ತದೆ. ನೀವು ಕಾಮ ವಿಕಾರವನ್ನು ಜಯಿಸುತ್ತೀರಿ. ಆದ್ದರಿಂದಲೇ ಇಲ್ಲಿ ಯಾರೇ ಬರಲಿ ಅವರೊಂದಿಗೆ ಕೇಳಲಾಗುತ್ತದೆ – ಕಾಮ ವಿಕಾರದ ಮೇಲೆ ವಿಜಯವನ್ನು ಪಡೆಯುತ್ತೀರೆಂದರೆ ತಂದೆಯೊಂದಿಗೆ ಮಿಲನ ಮಾಡಿ. ಸ್ವಂತ ಮಕ್ಕಳು ಹಾಗೂ ಮಲತಾಯಿ ಮಕ್ಕಳಿರುತ್ತಾರೆ. ಸ್ವಂತ ಮಕ್ಕಳು ಎಂದೂ ಕಾಮ ವಿಕಾರದಲ್ಲಿ ಹೋಗುವುದಿಲ್ಲ. ಈಗ ನಿಮಗೆ ಜ್ಞಾನ ಸಾಗರ ತಂದೆಯು ಸಿಕ್ಕಿದ್ದಾರೆ ಆದರೆ ಕೃಷ್ಣನಿಗೆ ಜ್ಞಾನ ಸಾಗರನೆಂದು ಹೇಳುವುದಿಲ್ಲ. ಶಿವ ಬಾಬಾರವರ ಮಹಿಮೆ ಹಾಗೂ ದೇವತೆಗಳ ಮಹಿಮೆ ಸಂಪೂರ್ಣವಾಗಿ ಬೇರೆಯಾಗಿದೆ. ದೇವತೆಗಳ ಮಹಿಮೆಯಾಗಿದೆ - ಸಂಪೂರ್ಣ ನಿರ್ವಿಕಾರಿ. ಶಿವ ತಂದೆಗೆ ಮನುಷ್ಯ ಸೃಷ್ಟಿಯ ಬೀಜರೂಪ, ಸತ್-ಚಿತ್-ಆನಂದ ಸ್ವರೂಪ, ಜ್ಞಾನಸಾಗರ ಎಂದು ಹೇಳಲಾಗುತ್ತದೆ. ಈ ಶರೀರವೂ ಸಹ ಮೊದಲು ಜಡವಾಗಿರುತ್ತದೆ ನಂತರ ಇದರಲ್ಲಿ ಆತ್ಮವು ಪ್ರವೇಶ ಮಾಡಿದಾಗ ಅದು ಚೈತನ್ಯವಾಗುತ್ತದೆ. ಈ ಮನುಷ್ಯ ಸೃಷ್ಟಿರೂಪಿ ವೃಕ್ಷವು ಹೇಗೆ ಉತ್ಪತ್ತಿಯಾಗುತ್ತದೆ ಎನ್ನುವುದನ್ನು ಕೇವಲ ಬೀಜರೂಪ ತಂದೆಯೇ ತಿಳಿದುಕೊಂಡಿದ್ದಾರೆ. ಅವರೇ ನೀವು ಮಕ್ಕಳಿಗೆ ಜ್ಞಾನವನ್ನು ಕೊಡುತ್ತಿದ್ದಾರೆ. ಬಾಬಾ ಹೇಳುತ್ತಾರೆ - ಮಕ್ಕಳೇ ನಿಮಗೆ ಸ್ವಲ್ಪ ಜ್ಞಾನವನ್ನು ಕೊಟ್ಟರೂ ನೀವು ಈ ಹಳೆಯ ಪ್ರಪಂಚದಿಂದ ಹೊಸ ಪ್ರಪಂಚದಲ್ಲಿ ಹೋಗಿ ಬಿಡುವಿರಿ. ಅದನ್ನೇ ಶಿವಾಲಯವೆಂದು ಹೇಳಲಾಗುತ್ತದೆ. ಶಿವಬಾಬಾ ಮುಖಾಂತರ ಸ್ಥಾಪನೆಯಾಗಿರುವ ಸ್ವರ್ಗ, ಇದರಲ್ಲಿ ಚೈತನ್ಯ ದೇವತೆಗಳೇ ನಿವಾಸ ಮಾಡುತ್ತಾರೆ. ಭಕ್ತಿಮಾರ್ಗದಲ್ಲಿ ಈ ದೇವತೆಗಳನ್ನು ಮಂದಿರಗಳಲ್ಲಿ ಕೂರಿಸಿದ್ದಾರೆ. ಈಗ ನೀವು ಸತ್ಯ-ಸತ್ಯ ಆತ್ಮಿಕ ಬ್ರಾಹ್ಮಣರಾಗಿದ್ದೀರಿ, ನಿಮ್ಮನ್ನು ಶಿವಬಾಬಾ ಬ್ರಹ್ಮಾರವರ ಮುಖಾಂತರ ತಮ್ಮವರನ್ನಾಗಿ ಮಾಡಿಕೊಂಡಿದ್ದೀರಿ. ಆ ಶಾರೀರಿಕ ಬ್ರಾಹ್ಮಣರು ನಾವು ಮುಖವಂಶಾವಳಿ ಬ್ರಾಹ್ಮಣರೆಂದು ಭಲೆ ಹೇಳುತ್ತಾರೆ. ಬ್ರಾಹ್ಮಣ ದೇವೀ-ದೇವತಾಯ ನಮಃ ಎಂದು ಹೇಳುತ್ತಾರೆ ಏಕೆಂದರೆ ಅವರು ತಿಳಿದುಕೊಳ್ಳುತ್ತಾರೆ - ನಾವು ಪೂಜಾರಿ ಬ್ರಾಹ್ಮಣರಾಗಿದ್ದೇವೆ, ನೀವು ದೇವತೆಗಳು ಪೂಜ್ಯರಾಗಿದ್ದೀರಿ ಎಂದು. ವಿಕಾರಿ ಬ್ರಾಹ್ಮಣರು ಪವಿತ್ರ ಬ್ರಾಹ್ಮಣರಿಗೆ ನಮಸ್ತೆ ಮಾಡುತ್ತಾರೆ. ನೀವೀಗ ಬ್ರಾಹ್ಮಣರಾಗಿದ್ದೀರಿ, ಇಂತಹ ಸಮಯವೂ ಬರುತ್ತದೆ ನಂತರ ನೀವೇ ಬ್ರಾಹ್ಮಣ ದೇವತಾಯ ನಮಃ ಎಂದು ಹೇಳುತ್ತೀರಿ ಏಕೆಂದರೆ ಈಗ ನೀವು ಪೂಜ್ಯರೇ ಹೋಗಿ ಪೂಜಾರಿ ಆಗುತ್ತೀರಿ. ಇದು ಅತಿ ದೊಡ್ಡ ಗುಹ್ಯವಾದ ರಮಣೀಕ ಮಾತುಗಳಾಗಿವೆ. ಯಾರು ಶ್ರೀಮತದ ಮೇಲೆ ನಡೆಯುವವರಿದ್ದಾರೆ, ಅವರೇ ಈ ರೀತಿ ಧಾರಣೆ ಮಾಡಿ ಅನ್ಯರಿಗೆ ಮಾಡಿಸುತ್ತಾರೆ. ಹೇಗೆ ಬ್ಯಾರಿಸ್ಟರ್, ಸರ್ಜನ್ ಎಷ್ಟು ಓದುತ್ತಾರೆ, ಅಷ್ಟು ಔಷಧಿಗಳು ಹಾಗೂ ವಿಷಯಗಳು ಬುದ್ಧಿಯಲ್ಲಿ ಇರುತ್ತವೆ. ಹೆಸರಂತೂ ವಕೀಲ ಎಂದಿರುತ್ತದೆ ಆದರೆ ಕೆಲವರು ಲಕ್ಷಾಧಿಪತಿ ಮತ್ತೆ ಕೆಲವರಿಗೆ ಸ್ವಲ್ಪವೂ ಸಂಪಾದನೆ ಇರುವುದಿಲ್ಲ. ಇಲ್ಲಿಯೂ

ಸಹ ನಂಬರ್ವಾರ್ ದಾನ ಮಾಡಿದಾಗ ಆಸ್ತಿಯು ನಂಬರ್ವಾರ್ ಸಿಗುತ್ತದೆ. ಆದ್ದರಿಂದಲೇ ಹೇಳುತ್ತಾರೆ ಹಣ ಕೊಟ್ಟರೆ ಹಣವೆಂದೂ ಖಾಲಿಯಾಗುವುದಿಲ್ಲ..... ಅವರಂತೂ ದಾನ ಮಾಡುತ್ತಾರೆಂದರೆ ಅಲ್ಪಕಾಲಕ್ಕೋಸ್ಕರ ಬೇರೆ ಜನ್ಮದಲ್ಲಿ ಪ್ರಾಪ್ತಿಯಾಗುತ್ತದೆ. ಶ್ರೀಮಂತರ ಮನೆಯಲ್ಲಿ ಜನ್ಮ ಪಡೆಯುತ್ತಾರೆ, ಆದರೆ ಇಲ್ಲಂತು 21 ಜನ್ಮಗಳಿಗೋಸ್ಕರ ರಾಜಾಯಿಯ ಅಧಿಕಾರಿಯಾಗುತ್ತಾರೆ. ನೀವು ಈಗ ಎಲ್ಲಾ ವಿಷಯಗಳನ್ನು ನೋಟ್ ಮಾಡಿಕೊಳ್ಳಬೇಕು. ನೀವು ಕಾಗದದ ಮೇಲೆ ನೋಡಿ ಭಾಷಣ ಮಾಡಬಾರದಾಗಿದೆ ಆದರೆ ಬುದ್ಧಿಯಲ್ಲಿಟ್ಟುಕೊಂಡು ಭಾಷಣ ಮಾಡಬೇಕಾಗಿದೆ. ಹೇಗೆ ಶಿವಬಾಬಾ ಜ್ಞಾನ ಸಾಗರ, ಪತಿತ ಪಾವನ ಆಗಿದ್ದಾರೆ, ಅದೇರೀತಿ ನೀವು ಮಕ್ಕಳೂ ಆಗಬೇಕಾಗಿದೆ. ಒಂದು ಮಗು ಪತ್ರದಲ್ಲಿ ಬರೆದಿದ್ದರು - ನಮ್ಮ ತಂದೆಯೂ ಟೀಚರ್ ಆಗಿದ್ದರು, ನೀವೂ ನಮ್ಮ ತಂದೆ, ಟೀಚರ್ ಆಗಿದ್ದೀರಿ. ಆದರೆ ಅವರು ಹದ್ದಿನ ಟೀಚರ್ ಆಗಿದ್ದಾರೆ, ಆದರೆ ತಂದೆಯು ಬೇಹದ್ದಿನ ಟೀಚರ್. ಬೇಹದ್ದಿನ ತಂದೆಯು ಬೇಹದ್ದಿನ ಮಾತುಗಳನ್ನು ತಿಳಿಸುತ್ತಾರೆ. ಹದ್ದಿನ ತಂದೆ ಹದ್ದಿನ ಮಾತುಗಳನ್ನೇ ತಿಳಿಸುತ್ತಾರೆ. ಅವರು ಹದ್ದಿನ ಸುಖ ಕೊಡುವವರಾಗಿದ್ದಾರೆ. ಹದ್ದಿನ ಸೇವೆ ಮಾಡುವವರು "ಸರ್ವೋದಯ" ಎಂದು ಹೆಸರು ಇಟ್ಟುಕೊಳ್ಳುತ್ತಾರೆ, ಇದೂ ತಪ್ಪಾಗಿದೆ. ಸರ್ವ ಎಂದರೆ ಇಡೀ ಪ್ರಪಂಚದ ಮೇಲಂತು ದಯೆ ತೋರಿಸುವುದಿಲ್ಲವೇ! ಬೇಹದ್ದಿನ ತಂದೆಯು ಸರ್ವರ ಮೇಲೆ ದಯೆ ತೋರಿಸಿ ಪಾವನರನ್ನಾಗಿ ಮಾಡುತ್ತಾರೆ. ತತ್ವಗಳನ್ನು ಪಾವನ ಮಾಡುತ್ತಾರೆ. ಒಂದೇ ಪ್ರಪಂಚವಿರುತ್ತದೆ, ಅದೇ ಹೊಸದರಿಂದ ಹಳೆಯದಾಗುತ್ತದೆ. ಭಾರತವೇ ಸ್ವರ್ಗವಾಗಿತ್ತು, ಭಾರತವೇ ನರಕವಾಗಿದೆ. ಈ ರೀತಿ ಅಲ್ಲ ಬೌದ್ಧ ಖಂಡ, ಕ್ರಿಶ್ಚಿಯನ್ಖಂಡ ಮಾತ್ರವೇ ಸ್ವರ್ಗವಾಗಿತ್ತು. ಒಬ್ಬ ತಂದೆಯೇ ಎಲ್ಲರನ್ನು ದುಃಖದಿಂದ ಬಿಡಿಸುವಂತಹ ಸ್ವರ್ಗದಾತ ಆಗಿದ್ದಾರೆ. ಅವರು ಮುಕ್ತಿದಾತ ಹಾಗೂ ಮಾರ್ಗದರ್ಶಕರು ಆಗಿದ್ದಾರೆ. ಆದ್ದರಿಂದ ಎಲ್ಲರೂ ಅವರನ್ನು ನೆನಪು ಮಾಡುತ್ತಾರೆ. ಈಗ ಆ ತಂದೆಯೇ ಹೇಳುತ್ತಾರೆ - ಮಕ್ಕಳೇ, ಸಮಯವೂ ತುಂಬಾ ಕಡಿಮೆ ಇದೆ, ಈಗ ದೇಹ ಸಹಿತ ದೇಹದ ಎಲ್ಲಾ ಸಂಬಂಧಗಳಿಂದ ಬುದ್ಧಿಯೋಗವನ್ನು ತೆಗೆಯಿರಿ. ಈಗ ನಾವು ಮಕ್ಕಳು ನಮ್ಮ ತಂದೆಯ ಜೊತೆ ಮುಕ್ತಿಧಾಮದಲ್ಲಿ ಹೋಗುತ್ತೇವೆ ಮತ್ತೆ ಬಂದು ಇಲ್ಲಿ ರಾಜ್ಯ ಮಾಡುತ್ತೇವೆ. ಮುಖ್ಯ ನಾಯಕ ಮತ್ತು ನಾಯಕಿಯ ಪಾತ್ರವೂ ನಮ್ಮದಾಗಿದೆ. ಹೇಗೆ ತಂದೆ-ತಾಯಿ ಹಾಗೆಯೇ ಮಕ್ಕಳೂ ಸಹ ಪುರುಷಾರ್ಥ ಮಾಡುತ್ತಾರೆ. ಪುರುಷಾರ್ಥ ಮಾಡಿಸುವವರು ಒಬ್ಬರೇ ಪರಮಪಿತ ಪರಮಾತ್ಮ ಅತಿ ಪ್ರಿಯರಾಗಿದ್ದಾರೆ. ಭಕ್ತಿಮಾರ್ಗದಲ್ಲಿಯೂ ಅವರನ್ನು ನೆನಪು ಮಾಡುತ್ತಾರೆ, ಆದರೆ ಅವರನ್ನು ತಿಳಿದುಕೊಂಡಿಲ್ಲ. ಋಷಿ-ಮುನಿ ಮುಂತಾದವರೂ ಸಹ ರಚಯಿತ ಮತ್ತು ರಚನೆಯೂ ಬೇಹಂತ್ ಆಗಿದೆಯೆಂದು ಹೇಳುತ್ತಿದ್ದರು ಅಂದಾಗ ಇವತ್ತಿನ ಗುರುಗಳು ನಾವೇ ಪರಮತ್ಮ ಆಗಿದ್ದೇವೆ ಎಂದು ಹೇಗೆ ಹೇಳುತಾರೆ! ದಿಲ್ವಾಡ ಮಂದಿರದಲ್ಲಿ ಆದಿದೇವನ ಚಿತ್ರವಿದೆ, ಕೆಳಗಡೆ ಅವರನ್ನೇ ಕಪ್ಪಾಗಿ ತೋರಿಸಿದ್ದಾರೆ. ಮತ್ತೆ ಅಚಲ್ಘರ್ನಲ್ಲಿ ಅದೇ ಮೂರ್ತಿಯನ್ನು ಚೆನ್ನದಲ್ಲಿ ಮಾಡಿಟ್ಟಿದ್ದಾರೆ. ಅವರೇ ಕೆಳಗಡೆ ತಪಸ್ಸು ಮಾಡುತ್ತಿದ್ದಾರೆ, ಮೇಲೆ ಸ್ವರ್ಗವಿದೆ, ಇದು ನಮ್ಮ ನೆನಪಾರ್ಥವಾಗಿದೆ. ಪತಿತರನ್ನು ಪಾವನ ಮಾಡುವುದರಿಂದ ಈ ಸಮಯ ಸಂಗಮವಾಯಿತಲ್ಲವೇ. ಭಕ್ತಿಮಾರ್ಗದವರು ಇರುತ್ತಾರೆ. ಈಗ ಬಾಬಾ ಈ ಶರೀರದ ಮುಖಾಂತರ ತಮ್ಮ ಜಡಮಂದಿರದ ನೆನಪಾರ್ಥವನ್ನೂ ನೋಡುತ್ತಾರೆ. ಅವರು ತಿಳಿಸುತ್ತಾರೆ - ಮಕ್ಕಳೇ, ನಾನೀಗ ನನ್ನ ನೆನಪಾರ್ಥವು ಹೇಗೆ ಮಾಡಲ್ಪಟ್ಟಿದೆ ಎಂಬುದನ್ನು ನೋಡುತ್ತೇನೆ. ನೀವೂ ತಮ್ಮ ನೆನಪಾರ್ಥವನ್ನು ನೋಡಿ. ಮೊದಲು ನಿಮಗೂ ಗೊತ್ತಿರಲಿಲ್ಲ ಇದು ನಮ್ಮದೇ ನೆನಪಾರ್ಥವೆಂಬುದು. ಈಗ ನಿಮಗೆ ಗೊತ್ತಿದೆ ನಾವೇ ಪೂಜ್ಯ ದೇವತೆಗಳಾಗಿದ್ದೇವೆ ಈಗ ನಾವೇ ಪೂಜಾರಿಯಾಗಿದ್ದೇವೆ. ನಾವೇ ದೇವತಾ, ಕ್ಷತ್ರಿಯ.... ಈ ಹಮ್ ಸೋ, ಸೋ ಹಮ್ನ ಅರ್ಥವನ್ನೂ ನಾವೇ ತಿಳಿದುಕೊಂಡಿದ್ದೇವೆ. ಹೊಸ ಪ್ರಪಂಚವೂ ಹೇಗೆ ಹಳೆಯದಾಗುತ್ತದೆ, ಇದೂ ನಮಗೆ ಗೊತ್ತಿದೆ. ಹೊಸ ಪ್ರಪಂಚವಾದಾಗ ಹಳೆಯದು ವಿನಾಶವಾಗುತ್ತದೆ. ಬ್ರಹ್ಮನ ಮುಖಾಂತರ ಸ್ಥಾಪನೆಯಂತು ಅವಶ್ಯವಾಗಿ ಇಲ್ಲಿಯೇ ಆಗಬೇಕು. ಪ್ರಜೆಗಳನ್ನೂ ಇಲ್ಲಿಯೇ ರಚಿಸುತ್ತಾರೆ. ಸೂಕ್ಷ್ಮವತನದಲ್ಲಿ ಬ್ರಹ್ಮ ಒಬ್ಬರೇ ಆಗಿದ್ದಾರೆ. ಏಕೆಂದರೆ ರಚನೆಯನ್ನು ರಚಿಸಿ ಪೂರ್ಣ ಮಾಡಿದ ನಂತರ ಫರಿಸ್ತೆ ಆಗಿ ಬಿಡುತ್ತಾರೆ. ನೀವು ಪ್ರಜಾಪಿತ ಬ್ರಹ್ಮನ ಮುಖವಂಶಾವಳಿ ಬ್ರಾಹ್ಮಣ ಕುಲಭೂಷಣರಾಗಿದ್ದೀರಿ. ವಾಸ್ತವದಲ್ಲಿ ನೀವೇ ಸರ್ವೋದಯ ನಾಯಕರಾಗಿದ್ದೀರಿ. ಶ್ರೀಮತದಿಂದ ನೀವು ತಮ್ಮಮೇಲೂ ದಯೆ ತೋರಿಸುಕೊಳ್ಳುವುದರಿಂದ ಸರ್ವರ ಮೇಲೂ ದಯೆ ತೋರಿಸುತ್ತೀರಿ. ಶ್ರೀ ಶ್ರೀ ಶಿವಬಾಬಾ ಕುಳಿತು ನಿಮ್ಮನ್ನು ಶ್ರೇಷ್ಠರನ್ನಾಗಿ ಮಾಡುತ್ತಾರೆ. ಶ್ರೇಷ್ಠಾತಿ ಶ್ರೇಷ್ಠ ಎಂದು ವಾಸ್ತವದಲ್ಲಿ ಒಬ್ಬರಿಗೆ ಹೇಳಬಹುದಾಗಿದೆ. ಪತಿತ ಪಾವನ ಸರ್ವರ ಸದ್ಗತಿದಾತ ಒಬ್ಬರೇ ಆಗಿದ್ದಾರೆ ಬಾಕಿ ಇದು ಅಸತ್ಯ, ಸುಳ್ಳಿನ ಪ್ರಪಂಚವಾಗಿದೆ. ಇದರಲ್ಲಿ ಏನೆಲ್ಲಾ ತಿಳಿಸುತ್ತಾರೆ ಅದೆಲ್ಲಾ ಅಸತ್ಯವೇ ಅಸತ್ಯವಿದೆ. ರಚಯಿತ ಮತ್ತು ರಚನೆಯ ಬಗ್ಗೆ ಅಸತ್ಯವನ್ನೇ ಹೇಳುತ್ತಾರೆ, ಬಾಬಾ ಸತ್ಯವನ್ನು ಹೇಳುತ್ತಾರೆ. ಇದನ್ನು ಸತ್ಯ ನಾರಾಯಣ ಕಥೆ ಎಂದು ಹೇಳಲಾಗುತ್ತದೆ. ಈಗ ನೋಡಿ ಜ್ಞಾನದಿಂದ ನೀವು ಹೇಗಿದ್ದವರು ಹೇಗಾಗುತ್ತಿದ್ದೀರಿ. ಶ್ರೀಮತದ ಮೇಲೆ ಎಷ್ಟು ನಡೆಯುತ್ತೀರಿ ಅಷ್ಟೂ ಉತ್ತಮ ಪದವಿಯನ್ನು ಪಡೆಯುತ್ತೀರಿ. ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯನ್ನು ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ ಇದಕ್ಕೆ ಶ್ರೀಮತ್ಭಗವತ್ಗೀತೆ ಎಂದು ಹೇಳಲಾಗಿದೆ. ಬಾಕಿ ಶಾಸ್ತ್ರಗಳೆಲ್ಲವೂ ಗೀತೆಯ ರಚನೆಯಾಗಿದೆ. ಗೀತೆಯು ಸರ್ವ ಶಾಸ್ತ್ರ ಶಿರೋಮಣಿಯಾಗಿದೆ. ಗೀತೆಯನ್ನು ಖಂಡನೆ ಮಾಡುವುದರಿಂದ ಯಾರಿಗೂ ಆಸ್ತಿ ಸಿಗುವುದಿಲ್ಲ. ಈ ಮಾತುಗಳನ್ನು ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಯಾರು ಹಳಬರಿದ್ದಾರೆ ಅವರೇ ತೀಕ್ಷ್ಣ ಬುದ್ಧಿಯುಳ್ಳವರಾಗಿದ್ದಾರೆಂದಲ್ಲ. ಕೆಲವರು ಹೊಸಬರು ಹಳಬರಿಗಿಂತಲೂ ಮುಂದೇ ಹೋಗುತ್ತಾರೆ. ನಿಧಾನವಾಗಿ ಬಂದವರೂ ಸಹ ಶ್ರೇಷ್ಠ ಪದವಿಯನ್ನು ಪಡೆಯುತ್ತಾರೆ. ಇದು ಸೆಕೆಂಡಿನ ಮಾತಾಗಿದೆ. ಬಾಬಾನ ಮಕ್ಕಳಾದರು ಎಂದರೆ ಹಕ್ಕುಧಾರರಾದರು. ಒಂದುವೇಳೆ ಯಾರಾದರು ಇಲ್ಲಿ ನಿಲ್ಲದಿದ್ದರೆ ಅದಕ್ಕೆ ಬಾಬಾ ಏನು ಮಾಡಲು ಸಾಧ್ಯ? ನಿಶ್ಚಯ ಬುದ್ಧಿಯವರಾಗಿ ಶ್ರೀಮತದ ಮೇಲೆ ನಡೆದರೆ ಸಾಕು. ಹೇಗೆ ಆ ಸಂಪಾದನೆಯಲ್ಲಿ ಬೃಹಸ್ಪತಿ ದಶೆ ಕುಳಿತುಕೊಳ್ಳುತ್ತದೆ, ಹಾಗೆಯೇ ಇಲ್ಲಿಯೂ ದಶೆಗಳು

ಕುಳಿತುಕೊಳ್ಳುತ್ತದೆ. ಶ್ರೀಮತದ ಅನುಸಾರ ನಡೆಯದೇ ಇದ್ದರೇ ಗ್ರಹಚಾರಿಯೂ ಕುಳಿತುಕೊಳ್ಳುತ್ತದೆ, ಬಾಕಿ ಇದು ಸಂಪೂರ್ಣ ಸಹಜ ಮಾತಾಗಿದೆ. ಬಾಬಾ ಮಮ್ಮಾರವರ ಮಕ್ಕಳಾಗುವುದರಿಂದ ಅಪಾರವಾದ ಸುಖದ ಆಸ್ತಿ ಸಿಗುತ್ತದೆ. ಒಬ್ಬರ ಮತದ ಮೇಲೆ ನಡೆಯುವುದರಲ್ಲಿಯೇ ಕಲ್ಯಾಣವಿದೆ. ಯಾರನ್ನು ನೀವು ಅರ್ಧ ಕಲ್ಪ ನೆನಪು ಮಾಡಿದಿರಿ, ಈಗ ಅವರೇ ನಿಮಗೆ ಸಿಕ್ಕಿರುವುದರಿಂದ ಅವರನ್ನು ಹಿಡಿದುಕೊಳ್ಳಬೇಕು, ಆದರೆ ಇದರಲ್ಲಿ ಏಕೆ ಗೊಂದಲರಾಗುತ್ತೀರಿ? ಬಾಬಾ ಹೇಳುತ್ತಾರೆ - ಮಕ್ಕಳೇ ನಾನು ಪುನಃ ನಾಟಕದನುಸಾರ ರಾಜ್ಯಭಾಗ್ಯವನ್ನು ಕೊಡಲು ಬಂದಿದ್ದೇನೆ. ಆದ್ದರಿಂದ ನನ್ನ ಮತದ ಮೇಲೆ ನಡೆಯಬೇಕಾಗುವುದು. ಬುದ್ಧಿಯಿಂದ ನನ್ನನ್ನು ನೆನಪು ಮಾಡಿ ಮತ್ತೆ ಯಾವುದೇ ಕಷ್ಟವನ್ನು ನಿಮಗೆ ಕೊಡುವುದಿಲ್ಲ. ಸ್ವರ್ಗದ ಆಸ್ತಿಯನ್ನು ನೀವು ಪಡೆಯುತ್ತೀರಿ. ನಿನ್ನೆ ಸ್ವರ್ಗವಿತ್ತು, ಇಂದು ನರಕವಾಗಿದೆ, ಈಗ ಪುನಃ ಸ್ವರ್ಗವಾಗುವುದಿದೆ. ನಿನ್ನೆ ನೀವಿಲ್ಲಿ ಮಾಲೀಕರಾಗಿದ್ದಿರಿ, ಇಂದು ಭಿಕ್ಷುಕರಾಗಿದ್ದೀರಿ. ಇದು ರಾಜ ಕುಮಾರ ಮತ್ತು ಭಿಕ್ಷುಕರಾಗುವಂತಹ ಆಟವಾಗಿದೆ. ಎಷ್ಟು ಸಹಜ ಮಾತಾಗಿದೆ. ಆತ್ಮಾಭಿಮಾನಿ ಆಗುವುದಿಲ್ಲ. ಇದರಲ್ಲಿಯೇ ಪರಿಶ್ರಮವಿದೆ. ಸನ್ಯಾಸಿಗಳು ಹೇಳುತ್ತಾರೆ - ನಿಮಗೆ ಕ್ರೋಧ ಬಂದರೆ ನೀವು ಬಾಯಿಯಲ್ಲಿ ಏನಾದರೂ ವಸ್ತುವನ್ನು ಹಾಕಿಕೊಳ್ಳಿ. ಈ ಎಲ್ಲಾ ದೃಷ್ಟಾಂತಗಳು ಈ ಸಮಯದ್ದಾಗಿವೆ. ಭ್ರಮರಿಯ ಉದಾಹರಣೆಯು ಇಲ್ಲಿಯದೇ ಆಗಿದೆ. ಹಾನಿಕಾರಕ ಕೀಟವನ್ನು ತಮ್ಮ ಸಮಾನ ಮಾಡಿಕೊಳ್ಳುತ್ತೀರಿ, ಇದು ಜಾದು ಆಗಿದೆ. ಅವಶ್ಯವಾಗಿ ಈ ಸಮಯದಲ್ಲಿ ಎಲ್ಲರೂ ಹಾನಿಕಾರಕ ಕೀಟಗಳಾಗಿದ್ದಾರೆ. ಅವರೆಲ್ಲರಿಗೆ ನೀವು ಬ್ರಾಹ್ಮಣಿಯರು ಭೂ, ಭೂ ಮಾಡುತ್ತೀರಿ (ಜ್ಞಾನ ಹೇಳುತ್ತೀರಿ). ಕೆಲವರು ಬ್ರಾಹ್ಮಣಿ ಅಥವಾ ಬ್ರಾಹ್ಮಣರು ಹಾರಲು ಯೋಗ್ಯರಾಗಿ ಬಿಡುತ್ತಾರೆ. ಕೆಲವರು ಶುದ್ರರಿಗೆ ಶೂದ್ರರಾಗಿಯೇ ಉಳಿದುಕೊಳ್ಳುತ್ತಾರೆ. ಸರ್ಪದ ಉದಾಹರಣೆಯು ಇಲ್ಲಿಯದೇ ಆಗಿದೆ. ನೀವು ತಮ್ಮನ್ನು ಆತ್ಮನೆಂದು ತಿಳಿಯಿರಿ. ಈ ಹಳೆಯ ಶರೀರವನ್ನು ಬಿಟ್ಟು ಸತ್ಯಯುಗದಲ್ಲಿ ಹೊಸ ಶರೀರವನ್ನು ತೆಗೆದುಕೊಳ್ಳಬೇಕಾಗಿದೆ. ತಂದೆಯು ಜ್ಞಾನದ ಸಾಗರರಾಗಿದ್ದಾರೆ, ಆದರೆ ಗೀತೆಯನ್ನು ಎಷ್ಟು ಚಿಕ್ಕದನ್ನಾಗಿ ಮಾಡಿ ಬಿಟ್ಟಿದ್ದಾರೆ. ಶ್ಲೋಕಗಳನ್ನು ಕಂಠಪಾಠ ಮಾಡಿಕೊಳ್ಳುತ್ತಾರೆ. ಉಳಿದೆಲ್ಲರೂ ಅವರ ಮೇಲೆ ಆಧಾರಿತರಾಗಿ ಬಿಡುತ್ತಾರೆ ಅಥವಾ ಅರ್ಪಣೆಯಾಗುತ್ತಾರೆ. ಗೀತೆಯನ್ನು ಓದುತ್ತಾ-ಓದುತ್ತಾ ಕಲಿಯುಗದ ಅಂತಿಮ ಸಮಯ ಬಂದು ಬಿಟ್ಟಿದೆ. ಸದ್ಗತಿ ಯಾರಿಗೂ ಸಿಗುವುದಿಲ್ಲ. ನಿಮಗೆ ಮಾತ್ರವೇ ಜ್ಞಾನವನ್ನು ತಿಳಿಸುತ್ತೇನೆ - ನೀವು ಸ್ವರ್ಗದಲ್ಲಿ ಹೊರಟು ಹೋಗುತ್ತೀರಿ. ಎಷ್ಟು ಮಧುರರಾಗಬೇಕಾಗಿದೆ ಹಾಗೂ ಧಾರಣೆ ಮಾಡಬೇಕಾಗಿದೆ. ವಿಚಾರ ಸಾಗರ ಮಂಥನ ಮಾಡಬೇಕು. ದಿನದಲ್ಲಿ ವ್ಯಾಪಾರ ಮಾಡಿ, ತುಂಬಾ ಸಂಪಾದನೆಯಾಗುವುದು. ಬೆಳಗ್ಗೆ-ಬೆಳಗ್ಗೆ ಆತ್ಮ ಉಲ್ಲಾಸಭರಿತವಾಗುತ್ತದೆ. ಇದನ್ನು ಮತ್ತೆ ಮತ್ತೆ ಅಭ್ಯಾಸ ಮಾಡುವುದರಿಂದ ಅಭ್ಯಾಸ ಆಗಿ ಬಿಡುವುದು. ಈಗ ಯಾರು ಮಾಡುತ್ತಾರೆ ಅವರು ಶ್ರೇಷ್ಠ ಪದವಿಯನ್ನು ಪಡೆಯುತ್ತಾರೆ, ನಿಶ್ಚಯಬುದ್ಧಿ ವಿಜಯಂತಿ ಸಂಶಯಬುದ್ಧಿ ವಿನಶ್ಯಂತಿ. ಬೇಹದ್ದಿನ ತಂದೆ ಸಿಕ್ಕಿದ್ದಾರೆ, ಇದರಲ್ಲಿ ಸಂಶಯವನ್ನು ಏಕೆ ತರುವಿರಿ. ಶಿವಬಾಬಾ ವಿಶ್ವದ ಮಾಲೀಕರನ್ನಾಗಿ ಮಾಡುತ್ತಿದ್ದಾರೆ, ಇದನ್ನು ಏಕೆ ಮರೆಯಬೇಕು. ಈ ಜ್ಞಾನರತ್ನಗಳೊಂದಿಗೆ ತುಂಬಾ ಪ್ರೀತಿ ಇರಬೇಕು. ಮಹಾದಾನಿ ತಂದೆಯು ನಿಮ್ಮನ್ನು ವಿಶ್ವದ ಮಾಲಿಕರನ್ನಾಗಿ ಮಾಡುತ್ತಾರೆ. ಈ ಜ್ಞಾನದ ಒಂದೊಂದು ರತ್ನವು ಲಕ್ಷಾಂತರ ರೂಪಾಯಿಗಳ ಬೆಲೆಯುಳ್ಳದ್ದಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಶ್ರೀಮತದಂತೆ ನಡೆದು ತಮ್ಮ ಮೇಲೆ ತಾವೇ ದಯೆ ತೋರಿಸಬೇಕಾಗಿದೆ. ಸರ್ವೋದಯರಾಗಿ ಪತಿತ ಪ್ರಪಂಚವನ್ನು ಪಾವನ ಮಾಡಬೇಕಾಗಿದೆ.

2. ಅಮೃತವೇಳೆ ಆತ್ಮಿಕ ವ್ಯಾಪಾರ ಮಾಡಿ ಸಂಪಾದನೆಯನ್ನು ಜಮಾ ಮಾಡಿಕೊಳ್ಳಬೇಕಾಗಿದೆ. ವಿಚಾರಸಾಗರ ಮಂಥನ ಮಾಡಬೇಕಾಗಿದೆ. ಆತ್ಮಾಭಿಮಾನಿಯಾಗುವಂತಹ ಪರಿಶ್ರಮವನ್ನು ಅವಶ್ಯವಾಗಿ ಮಾಡಬೇಕಾಗಿದೆ.

ವರದಾನ: ಸರ್ವಶಕ್ತಿಗಳನ್ನು ಆದೇಶದನುಸಾರ ನಡೆಸುವಂತಹ ಶಕ್ತಿ ಸ್ವರೂಪ ಮಾಸ್ಟರ್ ರಚೈತ ಭವ.

ಯಾವ ಮಕ್ಕಳು ಮಾಸ್ಟರ್ ಸರ್ವಶಕ್ತಿವಂತನ ಅಧಿಕಾರದಿಂದ, ಶಕ್ತಿಗಳನ್ನು ಆದೇಶದನುಸಾರ ನಡೆಸುತ್ತಾರೆಂದರೆ ಪ್ರತೀ ಶಕ್ತಿಯೂ ರಚನೆಯ ರೂಪದಲ್ಲಿ, ಮಾಸ್ಟರ್ ರಚೈತನ ಮುಂದೆ ಬರುತ್ತದೆ. ಆದೇಶ ಮಾಡಿದ ಕೂಡಲೇ ಹಾಜರಾಗಿ ಬಿಡುತ್ತದೆ. ಅಂದಮೇಲೆ ಪ್ರಭು ಅರ್ಥಾತ್ ತಂದೆಯವರ ಪ್ರತೀ ಹೆಜ್ಜೆಯ ಶ್ರೀಮದನುಸಾರ ಪ್ರತೀ ಸಮಯದಲ್ಲಿ "ಆಯಿತು-ಪ್ರಭು" ಅಥವಾ ಪ್ರತೀ ಆಜ್ಞೆಯಲ್ಲಿ "ಅಪ್ಪಣೆ-ಪ್ರಭು" ಮಾಡುತ್ತಾರೆ. ಇಂತಹವರ ಮುಂದೆ ಪ್ರತಿಯೊಂದು ಶಕ್ತಿಯೂ ಸಹ ಅಪ್ಪಣೆ ಪ್ರಭು ಅಥವಾ ಅಪ್ಪಣೆ ಮಾಸ್ಟರ್ ಪ್ರಭು ಎನ್ನುತ್ತದೆ. ಈ ರೀತಿ ಆದೇಶದನುಸಾರ ಶಕ್ತಿಗಳನ್ನು ಕಾರ್ಯದಲ್ಲಿ ಉಪಯೋಗಿಸುವವರನ್ನೇ ಮಾಸ್ಟರ್ ರಚೈತನೆಂದು ಹೇಳಲಾಗುವುದು.

ಸ್ಲೋಗನ್: ಸರಳವಾಗಿದ್ದು ಅನೇಕ ಆತ್ಮರಿಗಾಗಿ ಉದಾಹರಣೆಯಾಗುವುದೇ ಬಹಳ ಶ್ರೇಷ್ಠವಾದ ಸೇವೆಯಾಗಿದೆ.